**ಸಿವಿಲ್ ಜಡ್ಜ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸಿರುಗುಪ್ಪ**

**ಸಿ.ಸಿ. ನಂ. 238/2020**

**ಸಿ.ಡಬ್ಲ್ಯೂ: 12 ಪಿ.ಡಬ್ಲ್ಯೂ: 5**

ಸಾಕ್ಷಿದಾರನ ಹೆಸರು : ಮಲ್ಲಯ್ಯ
ತಂದೆಯ ಹೆಸರು : ನರಸಪ್ಪ
ವಯಸ್ಸು : 78 ವರ್ಷ
ಕೆಲಸ : ನಿವೃತ್ತ ಶಿಕ್ಷಕರು
ವಾಸ : ರಾಯಚೂರು

**ಸಾಕ್ಷಿಗೆ ದಿನಾಂಕ:24.11.2025 ರಂದು ಪ್ರಮಾಣ ವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆ : ಸ.ಸ.ಅ. ರವರಿಂದ**

**ಮುಖ್ಯ ವಿಚಾರಣೆ: ಮಾನ್ಯ ಸರ್ಕಾರಿ ಅಭಿಯೋಜಕರಿಂದ:**,

1. ಚಾಸಾ 1 ನನಗೆ ಗೊತ್ತು. ನನಗೆ ಚಾಸಾ 2 ರಿಂದ 8, ಚಾಸಾ 13 ರಿಂದ 25 ಗೊತ್ತು. ಆರೋಪಿ ನಂ 1 ರಿಂದ 3 ಗೊತ್ತು.

2. 2012 ರಲ್ಲಿ 1 ನೇ ಆರೋಪಿ ಹಾಗೂ ಚಾಸಾ 1 ರವರ ಮದುವೆ ಸಿರುಗುಪ್ಪದ ವೆಂಕಟೇಶ ಕಲ್ಯಾಣ ಮಂಟಪದಲ್ಲಿ ಆಗಿತ್ತು. ಆಗ ನಾವು ಹಾಜರು ಇದ್ದೆವು. ಮದುವೆ ಸಮಯದಲ್ಲಿ 1 ಲಕ್ಷ ನಗದು ಹಾಗೂ 10 ತೊಲೆ ಬಂಗಾರ 1 ನೇ ಆರೋಪಿಗೆ ವರದಕ್ಷಿಣೆ ಅಂತಾ ಚಾಸಾ 2 ರವರು ಕೊಟ್ಟಿದ್ದರು. ಚಾಸಾ 1 ಮದುವೆ ನಂತರ ತನ್ನ ಗಂಡನ ಮನೆಗೆ ಹೋಗಿದ್ದರು. ಎರಡು ತಿಂಗಳು ನಂತರ 1 ನೇ ಆರೋಪಿ ಚಾಸಾ 1 ರವರಿಗೆ ಹೊಡೆ ಬಡೆ ಮಾಡಿ ಚಾಸಾ 2 ರವರಿಂದ 2 ಲಕ್ಷ ರೂಪಾಯಿ ಹಣ ತರಬೇಕು ಹಾಗೂ ಮನೆ ಕಟ್ಟಿಸಿಕೊಡಬೇಕು ಎಂದು ಬೇಡಿಕೆ ಇಟ್ಟಿದ್ದನು. ಆರೋಪಿ ನಂ 1 ಹಲವಾರು ಬಾರಿ ಚಾಸಾ 1 ರವರಿಗೆ ವರದಕ್ಷಿಣೆಗಾಗಿ ಕಿರುಕುಳ ಕೊಟ್ಟಿರುತ್ತಾರೆ. ನಾವು ಹಲವಾರು ಬಾರಿ ಪಂಚಾಯತಿ

ಮಾಡಿ ಚಾಸಾ 1 ರವರನ್ನು ಆಕೆಯ ಗಂಡನ ಮನೆಗೆ ಬಿಟ್ಟು ಬಂದಿರುತ್ತೇವೆ. ನಾವು ಬುದ್ದಿವಾದ ಹೇಳಿದರು ಸಹ 1 ನೇ ಆರೋಪಿ ನಮ್ಮ ಮಾತು ಕೇಳಲಿಲ್ಲ, ಆದ್ದರಿಂದ ಚಾಸಾ 1 ರವರು ಪೋಲಿಸ್ ಠಾಣೆಯಲ್ಲಿ ದೂರು ನೀಡಿದರು. ಈ ಬಗ್ಗೆ ಪೋಲಿಸರಿಗೆ ಹೇಳಿಕೆ ಕೊಟ್ಟಿದ್ದೆನೆ.

**ಪಾಟಿ ಸವಾಲುಃ ಆರೋಪಿ ಪರ ವಕೀಲರಿಂದಃ**

3. ನಾನು ನಿವೃತ್ತ ಶಿಕ್ಷಕ. ನನ್ನ ಸ್ವಂತ ಊರು ರಾಯಚೂರು. ಪೋಲಿಸರಿಗೆ ನೀಡಿದ ಹೇಳಿಕೆಯಲ್ಲಿ ನನ್ನ ವಿಳಾಸವನ್ನು ಸರಿಯಾಗಿ ಹೇಳಿದ್ದೆನೆ. ನಾನು ನನ್ನ ವಿಳಾಸವನ್ನು ಬಳ್ಳಾರಿ ಜಿಲ್ಲೆ ಎಂದು ಹೇಳಿಕೆಯಲ್ಲಿ ಬರೆಯಿಸಿದ್ದೆನೆ ಎಂದರೆ ಸರಿಯಲ್ಲ. ಚಾಸಾ 2 ನನ್ನ ಅಳಿಯ ಆಗಬೇಕು. ಚಾಸಾ 3 ನನ್ನ ಮಗಳು. ಚಾಸಾ 1 ನನ್ನ ಮೊಮ್ಮಗಳು. ಮದುವೆ ಆದ ನಿಖರವಾದ ದಿನಾಂಕ ಮತ್ತು ಸಮಯ ನೆನಪಿಲ್ಲ. ಮದುವೆ ಸಮಯದಲ್ಲಿ ಈರಣ್ಣ, ಮುಕ್ಕಣ್ಣ, ಸುರೇಶ, ಅಡಿವೆಪ್ಪ ಇನ್ನು ಹಲವರು ಇದ್ದರು. ಮದುವೆ ಸಮಯದಲ್ಲಿ ನನ್ನ ಮೊಮ್ಮಗಳ ಹೆಸರು ಅಂಕಿತಾ ಎಂದು ಇತ್ತು. ನನ್ನ ಹೇಳಿಕೆಯನ್ನು ಪೋಲಿಸ ಠಾಣೆಯಲ್ಲಿ ನೀಡಿದ್ದೆನೆ. ಆಗ ಚಾಸಾ 1, 2, 3 ಮತ್ತು 15 ಇದ್ದರು. ಚಾಸಾ 15 ಕೆಂಚನಗುಡ್ಡದವರು. ಮದುವೆ ಮುಗಿದ ನಂತರ ಸಂಜೆ ಚಾಸಾ 2 ರವರು 1 ನೇ ಆರೋಪಿ ಕೈಯಲ್ಲಿ ವರದಕ್ಷಿಣೆ ಕೊಟ್ಟರು. ಹಣದ ಮುಖ ಬೆಲೆ ಹೇಳಲು ಆಗುವುದಿಲ್ಲ. 1 ನೇ ಆರೋಪಿಗೆ ಅರ್ಧ ತೊಲೆ ಬಂಗಾರದ ಉಂಗುರ ಕೊಟ್ಟಿದ್ದೆವು. ಆಗ ಚಾಸಾ 2 ಮತ್ತು 3 ಇದ್ದರು. ಆಗ ಸಮಯ ಎಷ್ಟು ಆಗಿತ್ತು ಎಂದು ಹೇಳಲಾಗುವುದಿಲ್ಲ. ಚಾಸಾ 1 ರವರು ಬಂಗಾರವನ್ನು ಎಲ್ಲಿಂದ ಖರೀದಿ ಮಾಡಿದರು ಎಂದು ಹೇಳಲಾಗುವುದಿಲ್ಲ. ಬಂಗಾರ ಖರೀದಿ ಬಗ್ಗೆ ದಾಖಲೆಗಳು ಇರುವ ಬಗ್ಗೆ ನನಗೆ ಗೊತ್ತಿಲ್ಲ.

4. ಚಾಸಾ 1 ರವರಿಗೆ ಆರೋಪಿತರು ಊಟ ತಿಂಡಿ ಕೊಡುತ್ತಿರಲಿಲ್ಲ ಎಂಬ ಬಗ್ಗೆ

ನನಗೆ ಯಾರು ಹೇಳಿದರು ಎಂದು ಹೇಳಲಾಗುವುದಿಲ್ಲ. ಚಾಸಾ 1 ರವರಿಗೆ ಹೊಡೆ ಬಡೆ ಮಾಡಿದ ಬಗ್ಗೆ ನಾನು ಪ್ರತ್ಯಕ್ಷವಾಗಿ ನೋಡಿಲ್ಲ. ಚಾಸಾ 1 ರವರು ಆರೋಪಿ 1 ರವರಿಗೆ ಭಾಗ ಕೇಳಿ ನೋಟಿಸ್ ಕಳುಹಿಸಿಲ್ಲ. ಚಾಸಾ 1 ರವರು ಆರೋಪಿತರು ವರದಕ್ಷಿಣೆ ಕೇಳುತ್ತಿದ್ದ ಬಗ್ಗೆ ತನ್ನ ತಂದೆ ತಾಯಿಗೆ ಹೇಳಿದರು. ಅವರು ನನಗೆ ಹೇಳಿರುತ್ತಾರೆ. ಚಾಸಾ 1 ರವರಿಗೆ ಚಿತ್ರಹಿಂಸೆ ಕೊಡುತ್ತಿದ್ದ ಬಗ್ಗೆ ಯಾರು ಹೇಳಿದ್ದಾರೆ ಎಂದು ಹೇಳಲಾಗುವುದಿಲ್ಲ. ಪಂಚಾಯತಿ ಮಾಡಿದ ದಿನಾಂಕ ಗೊತ್ತಿಲ್ಲ. ಪಂಚಾಯತಿಯನ್ನು ಆರೋಪಿತರ ಊರಿನಲ್ಲಿ ಮಾಡಿದ್ದೆವು. ಪಂಚಾಯತಿ ಆದಾಗ ನಾನು ಇದ್ದೆ. ಆರೋಪಿತರಲ್ಲಿ ಯಾರು ಈರಣ್ಣ ಮತ್ತು ಮಾಕಪ್ಪ ಎಂದು ಗುರುತಿಸಲಾಗುವುದಿಲ್ಲ. ಆರೋಪಿ ನಂ 2 ಮತ್ತು 3 ರವರು ಚಾಸಾ 1 ರವರಿಗೆ ಯಾವಾಗ ಕಿರುಕುಳ ಕೊಟ್ಟರು ಎಂದು ನನಗೆ ಗೊತ್ತಿಲ್ಲ. ಆರೋಪಿ ನಂ 1 ರವರು ಮನೆ ಕಟ್ಟಿಸಿಕೊಡಬೇಕು ಎಂದು ಕೇಳಿದ ಬಗ್ಗೆ ಚಾಸಾ 1 ರಿಂದ 3 ರವರು ಹೇಳಿರುತ್ತಾರೆ. ಚಾಸಾ 1 ರವರಿಗೆ ಹೊಡೆದು ಮನೆಗೆ ಕಳುಹಿಸಿದ ದಿನಾಂಕ ಹೇಳಲಾಗುವುದಿಲ್ಲ. ಆರೋಪಿ ನಂ 1 ಚಾಸಾ 1 ರವರಿಗೆ ಯಾವುದೇ ಹಿಂಸೆ, ಕಿರುಕುಳ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಹೊಡೆ ಬಡೆ ಮಾಡಿಲ್ಲ ಎಂದರೆ ಸರಿಯಲ್ಲ. ಚಾಸಾ 1 ರಿಂದ 3 ರವರು ನನಗೆ ಸಂಬಂಧಿಕರು ಆಗಿರುವುದರಿಂದ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ. ಆರೋಪಿ ಯಾವುದೇ ತಪ್ಪು ಮಾಡಿಲ್ಲ ಎಂದರೆ ಸರಿಯಲ್ಲ.

**ಮರು-ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೆ. ಸರಿ ಇದೆ.

**ಸಿವಿಲ್ ಮತ್ತು ಜೆ.ಎಂ.ಎಫ್.ಸಿ.**

**ನ್ಯಾಯಾಧೀಶರು, ಸಿರುಗುಪ್ಪ .**